ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2017–18 ದಿನಾಂಕ: 8–11–2017

# ಪತ್ರಿಕಾ ಆಮಂತ್ರಣ

**1. ಚಿಣ್ಣರಿಂದ ಕನಕದಾಸರ ಸಚಿತ್ರ ಕಥಾ ಮಾಲಿಕೆ ಆರು ಪುಸ್ತಕಗಳ ಲೋಕಾರ್ಪಣೆ:**

ಅಧ್ಯಕ್ಷತೆ:
ಬೋಳುವಾರು ಮಹಮದ್ ಕುಂಞ
ಹಿರಿಯ ಲೇಖಕರು

ಮುಖ್ಯ ಅತಿಥಿ:
ಎನ್.ಆರ್. ವಿಶುಕುಮಾರ್,
ಅಧ್ಯಕ್ಷರು, ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ಹಾಗೂ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ದಿನಾಂಕ: 9–11–2017, ಗುರುವಾರ ಬೆಳಿಗ್ಗೆ 10–30 ಗಂಟೆಗೆ
ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು

2. ಶ್ರೀ ಹಿಮಾನ್‌ಶು ಗುಲಾಟಿ, ನಾರ್ವೆ ಪ್ರೋಗ್ರೇಸ್ ಪಾರ್ಟಿಯ ಮುಖಂಡರು, ಉಪ ಮಂತ್ರಿಗಳು, ನಾರ್ವೆ ದೇಶ ಇವರು ಕರ್ನಾಟಕ ವಿಧಾನ ಸಭಾಧ್ಯಕ್ಷರನ್ನು ಭೇಟಿ ಮಾಡುವರು.

ದಿನಾಂಕ: 9–10–2017 ಗುರುವಾರ ಮಧ್ಯಾಹ್ನ 3–00 ಗಂಟೆಗೆ
ಸ್ಥಳ: ಸಭಾಧ್ಯಕ್ಷರ ಕೊಠಡಿ, ವಿಧಾನ ಸೌಧ, ಬೆಂಗಳೂರು

# ಪತ್ರಿಕಾ ಪ್ರಕಟಣೆ

ಸಂಖ್ಯೆ 276/396

## ತೆರಿಗೆ ಅಭಿಯಾನ

ಬೆಂಗಳೂರು, ನವೆಂಬರ್ 8, (ಕರ್ನಾಟಕ ವಾರ್ತೆ)

ಕೆಲವು ವಾಹನ ಮಾಲೀಕರು ತಮ್ಮ ವಾಹನಗಳಿಗೆ ತೆರಿಗೆಯನ್ನು ಪಾವತಿಸದೆ ಇರುವುದು ಕಂಡುಬಂದಿರುವ ಹಿನ್ನಲೆಯಲ್ಲಿ ಉಪ ಸಾರಿಗೆ ಆಯುಕ್ತರು ಮತ್ತು ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ, ಬೆಂಗಳೂರು(ಉತ್ತರ) ಯಶವಂತಪುರ, ಬೆಂಗಳೂರು –22, ವತಿಯಿಂದ ತೆರಿಗೆ ಅಭಿಯಾನವನ್ನು ಆಯೋಜಿಸಿದೆ.

ಕಛೇರಿಯ ಸಿಬ್ಬಂದಿ ವಾಹನ ತೆರಿಗೆ ಬಾಕಿದಾರರ ವಿಳಾಸಕ್ಕೆ ಭೇಟಿ ಮಾಡಿ ನೋಟೀಸ್ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ವಾಹನದ ತೆರಿಗೆ ಪಾವತಿಸದೆ ಇರುವ ವಾಹನ ಮಾಲೀಕರು ಕೂಡಲೇ ಕಛೇರಿಗೆ ಹಾಜರಾಗಿ ತಮ್ಮ ವಾಹನದ ತೆರಿಗೆ ಬಾಕಿಯನ್ನು ಪಾವತಿಸುವಂತೆ ಸೂಚಿಸಿದೆ.

ತಪ್ಪಿದ್ದಲ್ಲಿ ವಾಹನವನ್ನು ಮುಟ್ಟುಗೋಲು ಹಾಕಿಕೊಂಡು ವಾಹನವನ್ನು ಹರಾಜು ಮಾಡಲು ಕ್ರಮ ಕೈಗೊಳ್ಳಲಾಗುವುದೆಂದು ಪ್ರಕಟಣೆ ತಿಳಿಸಿದೆ.